ಮೂತಿಮಖಾ ತೊಳಿಯೋದು, ಓ ತಿಳಕಂಡ್ರೆ ಒಂದಲ್ಲ ಎರಡಲ್ಲ ಮುನ್ನೂರು ಮೂವತ್ತು ಗಳಿಗೇಲು ನೀರಿಲ್ಲ ನೀರಿಲ್ಲ ಎಂದು ಗೊಣಗಾಡುತ್ತಿರುವ ಸಿದ್ದಮ್ಮನ ಗಂಡ ಗಂಗಣ್ಣನೆಂಬೋನು, ಹೆಂಡತಿಯ ನೀರು ನೀರೆಂಬ ಆಲಾಪನೆಯನ್ನ ಕೇಳಿಸಿಕೊಂಬಲಾರದೆ ಸೈಕಲ್ಲಿಗೆ ನಾಕು ಬಿಂದಿಗೆಗಳನ್ನ ಕಟ್ಟಿಕೊಂಡೋಗಿ ಊರಮುಂದಿರುವ ಪಬ್ಲಿಕ್ ನಲ್ಲಿವೊಳಗೆ ನಿಯ್ಯತ್ತಾಗಿ ಎದುಸಿರು ಬಿಟ್ಟುಗೊಂಡು ನೀರು ತರತಾ ಅವನೆ. ತಂದವನು ಮನೆಯ ಹಟ್ಟಿಬಯಲಲ್ಲಿ ಬಾಯಿಬಿಟ್ಟುಗೊಂಡು ನಿಂತಿರುವ ಡ್ರಮ್ಮಿನ ತುಂಬ ತುಂಬಿಸಿಟ್ಟು ಎದುಸಿರು ಬಿಡತಾ ಅವನೆ. ದಿನವು ಇಂತ ಎದುಸಿರಿನ ಬಂಗಾಟವನ್ನ ನೋಡಲರ್ದೆ, ನೀರು ಬಿಡೊ ಆಂಜನಿ ಮನೆತಾಕೆ ಎಪ್ಪತ್ತಾರು ಸಲ ಹೋಗಿ ಹೋಗಿ ಬಾರೋ ಮಾರಾಯ. ನಮ್ಮನೆಯಾಗೆ ನಲ್ಲಿ ಕೆಟ್ಟು ಕುಂತ್ಯೆತೆ ಪೈಪೇನಾದ್ರು ಕಟ್ಟಿಕೊಂಡ್ಯೆತೊ ಏನೊ? ಅಥವಾ ಎಲ್ಲಾದರು ತಳಭಾಗದಲ್ಲಿ ಒಡದೋಗ್ಯೆತೊ ಎಂಗೊ? ಅದರ ಇಳುವು ಬಳುವು ನಿನಗೆ ಗೊತ್ತಾಗ್ ಬೇಕಲಾ ನಮಗೇನು ಗೊತ್ತಲ? ನೀನು ಸರಿಮಾಡುಕೊಟ್ರೆ ನಿನ್ನ ಋಣದಾಗೇನಿರಲ್ಲ ಬಾರೊ ಹುಡುಗ ಅದೆಷ್ಟು ಖರ್ಚಾಗುತ್ಯೆತೋ ಅಷ್ಟು ಕೊಡುತೀವಿ ಬಾರೊ ಸ್ವಾಮಿ, ಅಂತ ಗಂಡ ಹೆಣುತಿ ಈ ಗಳಿಗೇಲು ಕೇಳಿ ಕೇಳಿ ಅವನ ಮುಂದೆ ಆಲಾಪಿಸಿಕೊಂಬುತ್ತಲೆ ಅವರೆ. ಇಗಾ ಬಂದೆ, ಅಗಾ ಬಂದೆ, ನಾಳಿಕ್ ಬರ್ತೀನಿ, ನಾಡಿದ್ದ ಬರ್ತೀನಿ ಅನುತ ಇಂಗೆ ನೀರು ಬಿಡೊ ಆಂಜನಿ ಇವರನ್ನ ಯಾಕೊ ಯಾಮರಸತಾ ಅವನೆ. ಎಂದು ಬರ್ತ್ತಾನೊ ನಮ್ಮನೆ ನೀರಿನ ಬಂಗ ಯಾವಾಗ್ ತೀರ್ ತ್ಯೆತೊ? ಆ ನಲ್ಲಿ ಸರಿಯಾಗಾಕೆ ಎಂದು ಗಳಿಗೆ ಕೂಡಿಬರ್ತ್ಯೆತೊ ಏನೊ? ಊರಲ್ಲಿ ನೋಡೀರೆ ಈಗ ತಿಂಗಳಿಂದೀಚಿಕ್ಕೆ ಯರ‍್ಯಾರಿಗೊ ಅವೆಂತಾವೊ ಜ್ವರ ಬಂದಾವಂತೆ. ಅಂತ ಜ್ವರ ಇವನಿಗಾದ್ರು ಬಂದು ದೊಡ್ಡಾಪತ್ತಾಗ್ ಬೇಕು ಅಂಬುವ ಸಿದ್ದಮ್ಮನುಸಿರು ಸೆಡವಿನೊಳಗೆ ಉರುಳಾಡುತ್ತಿರುವ ಈ ಗಳಿಗೆಯಲ್ಲಿ ಅವಳ ಮನೆಯವರೆಲ್ಲ ಆಂಜನಿಗೆ ಶಾಪವಿಕ್ಕತಾ ಅವರೆ. ಇಂಗೆ ನಲ್ಲಿ ಕೆಟ್ಟು ಕುಂತಿರುವ ಚಿಂತೇಲೆ ಇವಳ ಸಂಸಾರಕ್ಕೆ ಸಾಕಾಗುವಷ್ಟು ನೀರಿಲ್ಲದ ದಿನನಿತ್ಯದ ಬದುಕು ಬಾಳೆಂಬ ಧಾವಂತಕ್ಕೆ ಎಡತಾಕುತ್ತಿರುವ ಇದೇ ಗಳಿಗೇಲಿ. ಹಟ್ಟಿ ಬಯಲಲ್ಲಿ ಕುಂತು ಹಸನಾಗಿ ಅಕ್ಕಿ ಜೆಲ್ಲಿಸುತ್ತಿರುವ ಸಿದ್ದಮ್ಮನಿಗೆ ಅವಳು ನರಸಿಂಹನೆಂಡ್ರು ಆಶಾ ಕಾರ್ಯಕರ್ತೆ ಜಯಮ್ಮನೆಂಬೋಳು ಕಣ್ಣಿಗೆ ಬೀಳತಾ ಅವಳೆ.

ಅದೇ ಆ ಮೂಲೆ ಮನೆಯ ಮೈಲಾರಿ ಮನೆ ಮುಂದೆ ಬಂದು, ತೊಟ್ಟಿಗಳನ್ನ ಡ್ರಮ್ಮುಗಳನ್ನ ಇಣುಕಿ ಇಣುಕಿ ಜಪ್ತಿ (ಅನ್ವೇಷಣೆ)ಮಾಡತಾ ಅವಳೆ. ಅವರ ಮನೆ ಮುಂದಿರುವ ಕಾಯಿಮಟ್ಟೆ ಕಾಯಿಚಿಪ್ಪುಗಳನ್ನ ಹುಡುಕುತಾ ಅವಳೆ. ಯಾಕೊ ಇವಳಿಗೆ ಮನೇಲಿ ಮಾಡಾಕೇನು ಕೆಲಸಿಲ್ಲವೇನೊ? ಬೆಳಬೆಳಗ್ಗೆ ಬಂದವಳಲ್ಲ ಅಂದುಕೊಂಡ ಸಿದ್ದಮ್ಮ ಜಲ್ಲಿಸಿದ ಅಕ್ಕಿಯನ್ನ ಒಳಗಿಟ್ಟು ಅವಳೆದೆಯ ದೊಡ್ಡುಸಿರನ್ನ ತಾಮಸಕ್ಕೆ ತಿರುಗಿಸಿಕೊಂಡು. ಉಂಡು ಗಂಟೆಯಾದರು ಕುಡಿಯದ ನೀರನ್ನ ಅವಳ ಗಂಟಲತುಂಬ ಶಬ್ದ ಉಕ್ಕುತ್ತ ಗಟಗಟನೆ ಕುಡಿದ ಸಿದ್ದಮ್ಮ ಏನೋ ನೆನಪಾದವಳಂತೆ, ಸೊಸೆಯ ಕಡೆ ಮುಖಾ ಮಾಡಿಕೊಂಡು, ‘ಮನೆಕಡೆ ನೆಟ್ಟಗೆ ನಿಗಾ ಮಾಡಮ್ಮುಯ್ಯ. ನೀನು ಬರೆ ಪೋನಿನೊಳಗೆ ತಲೆ ತೂರುಸ್ಕಂಡಿರಬ್ಯಾಡ ಅದರಾಗೇನು ನಮಗೆ ಬೇಕಾದ್ದ ಯಾವ ಹಿಟ್ಟುಸೊಪ್ಪು ಹುಟ್ಟಿಬರಲ್ಲ? ಅವನು ನೀರು ಬಿಡೊ ಆಂಜನಿ ಏನಾದ್ರು ಬಂದ್ರೆ ನೀನು ನಿನಗಂಡ ಇಬ್ಬರು ಸೇರ್ ಕಂಡು ನಲ್ಲಿ ರಿಪೇರಿ ಮಾಡಸರಮ್ಮುಯ್ಯ’ ಅನ್ನುತ್ತ ಕಿರೆ ಸೊಸೆಗೆ ಎಚ್ಚರಿಕೆ ಕೊಟ್ಟು, ಸಿದ್ದಮ್ಮ ಸರಸರನೆ ವರದರಾಜನ ಹೊಲದಾಗೆ ಕಡ್ಲೆ ಬೀಜ ಬಿತ್ತುವ ಕೂಲಿ ಕೆಲಸಕ್ಕೋದ್ಲು. ಗಂಡ ಗಂಗರಾಜ, ಹಟ್ಟಿ ಬಯಲಲ್ಲಿ ಬಸಬಸನೆ ಉಸಿರು ಚೆಲ್ಲಿ ಗೂಟಗಳಜೊತೆ ಗುದ್ದಾಡುತ್ತಿದ್ದ ಜೀವದನಗಳನ್ನ ಹೊಡಕೊಂಡು ಮೇಯಿಸಲು ಊರಾಚೆಯ ರಾಗಡಿ ನೆಲಕ್ಕೋದ.

ಊರಲ್ಲಿ ಗುಲಾಬಿ ಬಣ್ಣದ ಸೀರೆ ಉಟ್ಟುಕೊಂಡು ಓಡಾಡುತ್ತಿರುವ ಅವಳು ಆಶಾ ಕಾರ್ಯಕರ್ತೆ ಜಯಮ್ಮನೆಂಬೋಳಿಗೆ ಇತ್ತಿತ್ತಲಾಗಿ ಮೈಯ್ಯೊಳಗೆ ಮನಸ್ಸೊಳಗೆ ನಿರಾಳವೆಂಬೋದು ಇಲ್ಲದಂಗಾಗ್ಯೆತೆ. ಅದು ಯಾಕೆಂದರೆ ಇದೇ ಚೀಲನಳ್ಳಿವೊಳಗೆ ಇತ್ತೀಚೆಗೆ ಡೇಂಗ್ಯು ಜ್ವರದ ಕೇಸುಗಳು ಜಾಸ್ತಿಯಾಗುತ್ತಿರುವ ಹಿನ್ನಲೆಯಲ್ಲಿ ಹೋಬಳಿ ಹೆಡ್ ಕ್ವಾಟರ್ಸ್‌ನಿಂದ ಜಯಮ್ಮನಿಗೆ ಪೋನುಗಳು ಬರೋದು